ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ –2

ಪರಿಷ್ಕೃತ

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶುಕ್ರವಾರ, ದಿನಾಂಕ: 16ನೇ ಅಕ್ಟೋಬರ್, 2026

*****

ಸಂಖ್ಯೆ:47

ದಿನಾಂಕ: 17ನೇ ಅಕ್ಟೋಬರ್, 2026ರಂದು ಸಂಜೆ 7.00 ಗಂಟೆಗೆ ಎಂ. ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು ಇಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ 5ನೇ ಟಿ–20 ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (KSCA) ವತಿಯಿಂದ ಆಯೋಜಿಸಲಾಗಿರುತ್ತದೆ. ಮಾನ್ಯ ಶಾಸಕರುಗಳಿಗೆ ನೀಡಲಾಗುವ ಎರಡು (2) ಉಚಿತ ಟಿಕೆಟ್‌ಗಳನ್ನು ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ದಿನಾಂಕ: 16&17ನೇ ಅಕ್ಟೋಬರ್, 2026ರಂದು **ಮಾನ್ಯ ಸಭಾಪತಿಯವರ ಆಪ್ತ** ಸಿಬ್ಬಂದಿ **ಶಾಖೆಯ ಬದಲಾಗಿ ಕಾರ್ಯದರ್ಶಿಯವರ ಕೊಠಡಿ ಸಂಖ್ಯೆ: 156'ಸಿ' ರಲ್ಲಿ** ವಿತರಿಸಲಾಗುವುದು. ಮಾನ್ಯ ಶಾಸಕರುಗಳು/ ಅವರ ಆಪ್ತ ಸಹಾಯಕರುಗಳು ಸದರಿ ಟಿಕೆಟ್‌ಗಳನ್ನು ಪಡೆಯಬಹುದಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಜ್ಯೋತಿ
ಕಾರ್ಯದರ್ಶಿ(ಪ್ರ)

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.

www.kla.kar.nic.in/council/council.htm

ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ –2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶುಕ್ರವಾರ, ದಿನಾಂಕ: 9ನೇ ಅಕ್ಟೋಬರ್, 2026

*****

ಸಂಖ್ಯೆ:47

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (KSCA) ವತಿಯಿಂದ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ 5ನೇ ಟಿ–20 ಅಂತರರಾಷ್ಟ್ರೀಯ ಪಂದ್ಯವನ್ನು ದಿನಾಂಕ: 17ನೇ ಅಕ್ಟೋಬರ್,2026ರಂದು ಸಂಜೆ 7.00 ಗಂಟೆಗೆ. ಎಂ. ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು ಇಲ್ಲಿ ಆಯೋಜಿಸಲಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಯವರೊಂದಿಗೆ ನಡೆದ ಸಭೆಯಲ್ಲಿ ಒಪ್ಪಿರುವಂತೆ KSCA ವತಿಯಿಂದ ಮಾನ್ಯ ವಿಧಾನ ಪರಿಷತ್ತಿನ ಶಾಸಕರುಗಳಿಗಾಗಿ ಪ್ರತ್ಯೇಕ ವಿಶೇಷ ಸ್ಟ್ಯಾಂಡ್ ಮೀಸಲಿಡಲಾಗಿರುತ್ತದೆ. ಮಾನ್ಯ ಶಾಸಕರುಗಳಿಗೆ ಈ ವಿಶೇಷ ಸ್ಟ್ಯಾಂಡ್‌ನಲ್ಲಿ ಈ ಕೆಳಗಿನಂತೆ ಟಿಕೆಟ್‌ಗಳು ಲಭ್ಯವಿರುತ್ತದೆ.

ಅ. ಉಚಿತ ಟಿಕೆಟ್‌ಗಳು ಎರಡು(2).

* ಪ್ರತಿ ಮಾನ್ಯ ಶಾಸಕರುಗಳಿಗೆ ಎರಡು (2) ಉಚಿತ ಟಿಕೆಟ್‌ಗಳನ್ನು ದಿನಾಂಕ: 16&17ನೇ ಅಕ್ಟೋಬರ್, 2026ರಂದು ಮಾನ್ಯ ಸಭಾಪತಿಯವರ ಆಪ್ತ ಸಿಬ್ಬಂದಿ ಶಾಖೆಯಿಂದ ವಿತರಿಸಲಾಗುವುದು.
* ಮಾನ್ಯ ಶಾಸಕರುಗಳು/ ಅವರ ಆಪ್ತ ಸಹಾಯಕರುಗಳು ಟಿಕೆಟ್‌ಗಳು ಪಡೆಯಬಹುದಾಗಿದೆ.

ಆ. ಹಣ ಪಾವತಿಸಿ ಪಡೆಯುವ ಟಿಕೆಟ್‌ಗಳು ಗರಿಷ್ಠ ಎರಡು (2).

* ಪ್ರತಿ ಟಿಕೆಟ್‌ಗೆ ರೂ 3,500/– (ಊಟ ಮತ್ತು ಆತಿಥ್ಯ ಸೇರಿ).
* ಈ ಟಿಕೆಟ್‌ಗಳು ಸಂಪೂರ್ಣ ಡಿಜಿಟಲ್ ಆಗಿದ್ದು, ಬಾಕ್ಸ್ ಆಫಿಸ್ ಅಥವಾ ಸಾರ್ವಜನಿಕ ಮಾರಾಟದಲ್ಲಿ ಲಭ್ಯವಿರುವುದಿಲ್ಲ.

...2...

* ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವ ಸುರಕ್ಷಿತ ಪಾವತಿ ಲಿಂಕ್ ಮೂಲಕ ಮಾತ್ರ ಆನ್‌ಲೈನ್‌ನಲ್ಲಿ ಖರೀದಿಸಬೇಕು.

ಹಣ ಪಾವತಿಸಿ ಪಡೆಯುವ ಟಿಕೆಟ್‌ಗಳಿಗೆ ಕ್ರಮ:

ಹಣ ಪಾವತಿಸಿ ಟಿಕೆಟ್ ಖರೀದಿಸಲು ಇಚ್ಛಿಸುವ ಮಾನ್ಯ ಶಾಸಕರು, ಪಾವತಿ ಲಿಂಕ್ ಕಳುಹಿಸಬೇಕಾದ ಮೊಬೈಲ್ ಸಂಖ್ಯೆಯನ್ನು KSCA ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ಸುಬೇಂದು ಘೋಷ್, ಮೊಬೈಲ್ ಸಂಖ್ಯೆ: 9611112903, email ceo@ksca.co.in ಗೆ ದಿನಾಂಕ: 12ನೇ ಅಕ್ಟೋಬರ್, 2026, ಸೋಮವಾರದೊಳಗೆ ಕಳುಹಿಸಿಕೊಡಬೇಕಾಗಿರುತ್ತದೆ.

ಈ ಸಂಬಂಧದಲ್ಲಿ ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, KSCA ಎಂ. ಚಿನ್ನಸ್ವಾಮಿ ಕ್ರೀಡಾಂಗಣ ಅವರ ಕಛೇರಿಯನ್ನು ಸಂಪರ್ಕಿಸಬಹುದೆಂದು ಈ ಮೂಲಕ ಎಲ್ಲಾ ಮಾನ್ಯ ಶಾಸಕರುಗಳ ಅದ್ಯ ಗಮನಕ್ಕೆ ಈ ಮೂಲಕ ತಿಳಿಯಪಡಿಸಲಾಗಿದೆ.

ಜ್ಯೋತಿ
ಕಾರ್ಯದರ್ಶಿ(ಪ್ರ)

ವಿಧಾನ ಪರಿಷತ್ತಿನಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.

www.kla.kar.nic.in/council/council.htm